ಕನ್ನಡಪ್ರಭ
ಸೋಮವಾರ 4.05.2026

ಗರಿಷ್ಠ 35 | ಕನಿಷ್ಠ 23 °C



ಕೋಟೆ ಆಂಜನೇಯನಿಗೆ ವಿಶೇಷ ಪೂಜೆ

ತಿಪಟೂರು: ನಗರದ ಪ್ರಸಿದ್ಧ ಕೋಟೆ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಕೋಟೆ ಆಂಜನೇಯ ಸ್ವಾಮಿಯವರಿಗೆ ಶನಿವಾರದ ವಿಶೇಷ ಪೂಜಾ ಪ್ರಯುಕ್ತ ಆಕರ್ಷಕ ವಿವಿಧ ಹೂವು ಹಾಗೂ ಪತ್ರೆಗಳು, ಹಾರಗಳನ್ನು ಉಪಯೋಗಿಸಿ ಅಲಂಕಾರ ಮಾಡಲಾಗಿತ್ತು. ಹೆಚ್ಚಿನ ಸಮಖ್ಯೆಯಲ್ಲಿ ಭಕ್ತರು ಮಹಾಮಂಗಳಾರತಿಗೆ ಆಗಮಿಸಿ ತಮ್ಮ ಇಷ್ಟಾರ್ಥಗಳ ಈಡೇರಿಕೆಗೆ ಪೂಜೆ ಸಲ್ಲಿಸಿದರು.



ಪಾವಗಡ ತಾಲೂಕಿನ ದೇವರಬೆಟ್ಟ ಗ್ರಾಮದಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್‌ಅವರ 135 ನೇ ಮತ್ತು ಬಾಬು ಜಗಜೀವನ್ ರಾಮ್ ರವರ 119ನೇ ಜಯಂತ್ಯುತ್ಸವ ಸಮಾರಂಭದಲ್ಲಿ ಶಾಸಕ ಹಾಗೂ ತುಮುಲ್ ಅಧ್ಯಕ್ಷರಾದ ಎಚ್.ವಿ.ವೆಂಕಟೇಶ್ ಭಾಗವಹಿಸಿದ್ದರು.



ಕೊರಟಗೆರೆ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ನಡೆದ ಕಬ್ಬಡ್ಡಿ ಪಂದ್ಯಾವಳಿಗಳಲ್ಲಿ ಕ್ರೀಡಾಪಟುಗಳ ಜೊತೆ ಗೃಹ ಸಚಿವ ಡಾ.ಜಿ.ಪರಮೇಶ್ವರ ತುಮಕೂರು ಎಸ್ಪಿ ಅಶೋಕ್, ತಹಸೀಲ್ದಾರ್‌ಮಂಜುನಾಥ್, ಕೊಡ್ಲಹಳ್ಳಿ ಅಶ್ವಥನಾರಾಯಣ, ಅರಕೆರೆ ಶಂಕರ್ ಇತರರು.

ಆಲಿಕಲ್ಲು ಸಹಿತ ಮಳೆಗೆ ತೆಂಗು, ಅಡಿಕೆ ನಾಶ

ತಾಲೂಕಿನಾದ್ಯಂತ ವರುಣನ ಆರ್ಭಟ | ಹಲವು ವರ್ಷಗಳಿಂದ ಬೆಳೆಸಿದ ಮರಗಳು ಧರೆ ಪಾಲು

• **ಕನ್ನಡಪ್ರಭ ವಾರ್ತೆ** ಶಿರಾ

ತಾಲೂಕು ಬುಕ್ಕಾಪಟ್ಟಣದಲ್ಲಿ ಆಲಿಕಲ್ಲು ಸಹಿತ ದಾಖಲೆಯ 39.1 ಮಿಮೀ ಮಳೆಯಾಗಿದ್ದು ಮಳೆ ಆರ್ಭಟಕ್ಕೆ ಗಾಳಿ ರಭಸಕ್ಕೆ ಬುಕ್ಕಾಪಟ್ಟಣದಲ್ಲಿ ಮರಗಳು ಧರೆಗುರುಳಿವೆ, ಆಲಿಕಲ್ಲು ಮಳೆಯಿಂದಾಗಿ ಮಾವಿನ ಮರಗಳಿಗೆ ಹಾನಿಯಾಗಿದ್ದು ಅಲ್ಲಲ್ಲಿ ಮುರಿದು ಬಿದ್ದಿವೆ. ಬುಕ್ಕಾಪಟ್ಟಣದ ಪ್ರಥಮ ದರ್ಜೆ ಕಾಲೇಜು ಆವರಣ ದಲ್ಲಿದ್ದ ಅರಳಿ ಮರ ಒಂದು ಮುರಿದು ಬಿದ್ದಿದೆ.

ಬುಕ್ಕಾಪಟ್ಟಣದ ವೆಂಕಟರಾಮ ಗೋವಿಂದಪ್ಪ ನವರಿಗೆ ಸೇರಿದ 30ಕ್ಕೂ ಹೆಚ್ಚು ಫಸಲಿಗೆ ಬಂದಿರುವ ಅಡಿಕೆ ಮರಗಳು ಗಾಳಿ ರಭಸಕ್ಕೆ ಮುರಿದುಬಿದ್ದಿದ್ದು ರೈತರು ಕಂಗಾಲಾಗಿದ್ದಾರೆ. ಜೈ ಲಕ್ಷ್ಮಮ್ಮ ಬಿನ್ ನಾಗಣ್ಣ ರವರ 22ಕ್ಕೂ ಹೆಚ್ಚು ಅಡಿಕೆ ಮರಗಳು ನೆಲಕ್ಕುರುಳಿವೆ, ಹೊಸ ಪಾಳ್ಯ ರಂಗನಾಥ್ ರವರ ತೋಟದಲ್ಲಿ 30ಕ್ಕೂ ಹೆಚ್ಚು ತೆಂಗು ಹಾಗೂ ಅಡಿಕೆ ಮರಗಳು ಬಿದ್ದು ಹೋಗಿದ್ದು. ಬುಕ್ಕಾಪಟ್ಟಣದ ಶಿವಕುಮಾರ್‌ಬಿನ್ ಪ್ರಕಾಶಪ್ಪನವರ ಜಮೀನಿನ 52ಕ್ಕೂ ಹೆಚ್ಚು ಅಡಿಕೆ ಮರಗಳು ನೆಲಕ್ಕುರುಳಿವೆ. ಹೊಸ ಪಾಳ್ಯದ ಶಿವರಾಮಯ್ಯ ಹೊಸ ಪಾಳ್ಯ 3 ತೆಂಗಿನ ಮರ 25 ಅಡಿಕೆ ಮರಗಳು ಗಾಳಿ ರಭಸಕ್ಕೆ ಮುರಿದುಬಿದ್ದಿದ್ದರೆ,



ಬುಕ್ಕಾಪಟ್ಟಣದಲ್ಲಿ ಆಲಿಕಲ್ಲು ಸಹಿತ ಮಳೆ ಆರ್ಭಟಕ್ಕೆ ಮರಗಳು ಉರುಳಿ ಬಿದ್ದಿರುವುದು.

ಬುಕ್ಕಾಪಟ್ಟಣದ ಮಾರುತಿ ನಗರದ ಬಳಿ ತಾಪಂ ಮಾಜಿ ಅಧ್ಯಕ್ಷ ಬಿಆರ್‌ಮಂಜುನಾಥ್ ರವರ ತೋಟದಲ್ಲಿ ತೆಂಗಿನ ಮರವೊಂದು ಗಾಳಿ ರಭಸಕ್ಕೆ ಬಿದ್ದು ಹೋಗಿದೆ. ಇನ್ನೂ ಹೆಚ್ಚಿನ ರೈತರ ಜಮೀನುಗಳಲ್ಲಿ ಅಡಿಕೆ ಹಾಗು ತೆಂಗಿನ ಮರಗಳು ಗಾಳಿ ರಭಸಕ್ಕೆ ಬಿದ್ದು ಹಾನಿಯಾಗಿದೆ.

ಸ್ಥಳಕ್ಕೆ ಬುಕ್ಕಾಪಟ್ಟಣದ ಪ್ರಭಾರ ಕಂದಾಯ ಅಧಿಕಾರಿ ಪವನ್ ಕುಮಾರ್, ಗ್ರಾಮ ಲೆಕ್ಕಾಧಿಕಾರಿ ಶ್ವೇತಾ, ಸಹಾಯಕ ತೋಟಗಾರಿಕೆ ಅಧಿಕಾರಿ ಸವಿತಾ ಸೇರಿದಂತೆ ಹಲವು ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ, ಬುಕ್ಕಾಪಟ್ಟಣದ ಹೊಸಹಳ್ಳಿಯಲ್ಲಿ ಮೂರು ವಿದ್ಯುತ್ ಕಂಬಗಳು ಭಾಗಶಃ ಹಾನಿಯಾಗಿದ್ದು ವಿದ್ಯುತ್ ತಂತಿಯ ಮೇಲೆ ಮರಗಳು ಬಿದ್ದ ಪರಿಣಾಮ ಬುಕ್ಕಾಪಟ್ಟಣ ಸುತ್ತಮುತ್ತ ವಿದ್ಯುತ್ ವ್ಯತ್ಯಯ ಉಂಟಾಗಿದ್ದು ಬೆಸ್ಕಾಂ ಅಧಿಕಾರಿಗಳು ಜಂಗಲ್ ತೆರವುಗೊಳಿಸಲು ಹರಸಾಹಸ ಪಡುತ್ತಿದ್ದ ದೃಶ್ಯ ಕಂಡು ಬಂದಿತು. ಅಧಿಕಾರಿಗಳು ಇತ್ತ ಗಮನಹರಿಸಿ ನಷ್ಟಕ್ಕೊಳಗಾದ ರೈತರಿಗೆ ಸೂಕ್ತ ಪರಿಹಾರ ಒದಗಿಸಿಕೊಡುವ ಕೆಲಸ ಮಾಡಬೇಕಾಗಿ ಸಾರ್ವಜನಿಕರು ರೈತರು ಮನವಿ ಮಾಡಿಕೊಂಡಿದ್ದಾರೆ.

ಆಲಿಕಲ್ಲು ಮಳೆಗೆ ದಾಳಿಂಬೆ ಬೆಳೆ ನಾಶ

ತಿಪಟೂರು: ತಾಲೂಕಿನ ಮಡೆನೂರು ಗ್ರಾಮದಲ್ಲಿ ಅಕಾಲಿಕ ಮಳೆಯಿಂದಾಗಿ ತೋಟಗಾರಿಕಾ ಬೆಳೆ ನಷ್ಟವಾಗಿದೆ. ರೈತರಾದ ಮಲ್ಲಿಕಾರ್ಜುನ ಸ್ವಾಮಿ ಅವರ ಲಕ್ಷಾಂತರ ರುಪಾಯಿ ವೆಚ್ಚ ಮಾಡಿ ಬೆಳೆದ ದಾಳಿಂಬೆ ಬೆಳೆ ಆಲಿಕಲ್ಲು ಮಳೆಗೆ ತುತ್ತಾಗಿ ಲಕ್ಷಾಂತರ ರುಪಾಯಿ ನಷ್ಟವಾಗಿದೆ. ತಮ್ಮ 8 ಎಕರೆಯಲ್ಲಿ ಬ್ಯಾಂಕ್ ಇನ್ನಿತರೇ ಖಾಸಗಿಯವರಿಂದ ಸಾಲ ಪಡೆದು ದಾಳಿಂಬೆ ಬೆಳೆದಿದ್ದರು. ಭೂಮಿ ಉಳುಮೆ, ಗಿಡ, ಗೊಬ್ಬರ, ಔಷಧಿಗಳು, ಕಳೆನಾಶ ವೆಚ್ಚ, ರಾಸಯನಿಕ ಗೊಬ್ಬರಗಳು ಸೇರಿದಂತೆ ಲಕ್ಷಾಂತರ ರುಪಾಯಿ ವೆಚ್ಚ ಮಾಡಿದ್ದರು. ಇನ್ನೊಂದೆರಡು ತಿಂಗಳಿನಲ್ಲಿ ದಾಳಿಂಬೆ ಹಣ್ಣಿನ ಉತ್ತಮ ಇಳುವರಿ ನಿರೀಕ್ಷೆಯಲ್ಲಿದ್ದ ರೈತ ಮಲ್ಲಿಕಾರ್ಜುನ ಸ್ವಾಮಿಯವರಿಗೆ ಬಿರುಗಾಳಿ, ಆಲಿಕಲ್ಲಿನ ಮಳೆ ಬಹೊದೊಡ್ಡ ಅನಾಹುತ ಸೃಷ್ಟಿಸಿದೆ. ತೋಟಗಾರಿಕೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಕೂಡಲೆ ಭೇಟಿ ನೀಡಿ ಪರಿಶೀಲಿಸಿ ಪರಿಹಾರಕ್ಕೆ ಸಹಕರಿಸಬೇಕಾಗಿದೆ.

ಸುದ್ದಿ ಸಿಂಚನ

ಸರ್ಕಾರಿ ಸುತ್ತೋಲೆಗೆ ಕವಡೆ ಕಿಮ್ಮತ್ತೂ ಇಲ್ಲ



ತುರುವೇಕೆರೆ: ಅಹಿಂಸಾ ಪ್ರತಿಪಾದಕರಾದ ಬುದ್ದನ ಜಯಂತಿಯಂದು ರಾಜ್ಯ ಸರ್ಕಾರ ಮಾಂಸ ಕತ್ತರಿಸುವುದು ಮತ್ತು ತಿನ್ನುವುದನ್ನು ನಿಷೇಧಿಸಿ ಸುತ್ತೋಲೆ ನೀಡಿದೆ. ಆದರಂತೆ ಪಟ್ಟಣದಲ್ಲೂ ಸಹ ಪಟ್ಟಣ ಪಂಚಾಯಿತಿ ವತಿಯಿಂದ ಸುತ್ತೋಲೆ ಹೊರಡಿಸಲಾಗಿತ್ತು. ಈ ಸುತ್ತೋಲೆಗೆ ಪಟ್ಟಣದ ಹಲವಾರು ಕೋಳಿ, ಹಂದಿ ಮತ್ತು ಕುರಿ ಮೇಕೆಯ ಮಾಂಸವನ್ನು ಮಾರುವ ಅಂಗಡಿಯವರು ತಮ್ಮ ಅಂಗಡಿಗಳನ್ನು ಮಚ್ಚಿ ಸುತ್ತೋಲೆಗೆ ಬೆಲೆ ನೀಡಿದರು. ಆದರೆ ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಬುದ್ದ ಜಯಂತಿಯ ಅಂಗವಾಗಿ ಮಾಂಸ ಮಾರಾಟ ನಿಷೇಧಿಸಿ ಯಾವುದೇ ಸುತ್ತೋಲೆಯನ್ನು ನೀಡಿಲ್ಲ ಎಂಬ ಆಪಾದನೆ ಬಂದಿದೆ. ಮಹತ್ಮಾಗಾಂಧಿ ಸೇರಿದಂತೆ ವಿವಿಧ ಮಹಾತ್ಮರ ಜಯಂತಿಯನ್ನು ಮಾಂಸ, ಮದ್ಯ ಮಾರಾಟ ಮಾಡಬಾರದೆಂದು ಸೂಚಿಸಲಾಗಿದೆ. ಆದರೆ ಸುತ್ತೋಲೆಯನ್ನು ಗಣನೆಗೆ ತೆಗೆದುಕೊಳ್ಳದ ಅಂಗಡಿಯವರು ಮತ್ತು ಜನರು ಈ ಸುತ್ತೋಲೆಗೆ ಕವಡೆ ಕಿಮ್ಮತ್ತನ್ನೂ ನೀಡದೇ ಎಂದಿನಂತೆ ತಮ್ಮ ಅಂಗಡಿ ಮುಂಗಟ್ಟನ್ನು ತೆರೆದು ವಹಿವಾಟು ಮಾಡಿದರು. ಜನರು ಬರುತ್ತಾರೆಂದು ಅಂಗಡಿ ತೆಗೆದಿದ್ದೇವೆ ಎಂದು ಅಂಗಡಿಯವರು ಹೇಳಿದರೆ, ಅಂಗಡಿಯವರು ತೆಗೆದಿದ್ದಾರೆಂದು ನಾವು ಮಾಂಸ ಖರೀದಿಸಲು ಬಂದವೆಂದು ಜನರು ಹೇಳುತ್ತಾರೆ. ಇದು ಕೋಳಿಯಿಂದ ಮೊಟ್ಟೆಯೇ?. ಮೊಟ್ಟೆಯಿಂದ ಕೋಳಿಯೇ ಎಂಬ ಜಿಜ್ಞಾಸೆಯಂತಿದೆ. ನಿನ್ನೆ ನಡೆದ ಬುದ್ಧ ಜಯಂತಿಯಂದು ಪಟ್ಟಣ ಹೊರತುಪಡಿಸಿ ತಾಲೂಕಿನ ಹಲವಾರು ಕಡೆ ಮಾಂಸ ಮಾರಾಟ ಎಗ್ಗಿಲ್ಲದೆ ನಡೆಯಿತು. ಈ ಕುರಿತು ವಿಚಾರಿಸಿದರೆ ಪಂಚಾಯಿತಿಯ ಹಲವಾರು ಪಿಡಿಓಗಳು ನಿರುತ್ತರರಾದರು. ಜನರಲ್ಲಿ ಈ ದಿನ ಮಾಂಸಾಹಾರ ಸೇವನೆ ಮಾಡಬಾರದು ಎಂಬ ಮನೋಭಾವ ಬರಬೇಕೇ ವಿನಃ ಎಲ್ಲವನ್ನೂ ಕಾನೂನಿನಿಂದ ನಿಯಂತ್ರಿಸಲು ಸಾಧ್ಯವಿಲ್ಲ ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು.

ಕೆ.ಕೆ. ಕಾನ್ವೆಂಟ್ ಶಾಲೆಗೆ ಉತ್ತಮ ಫಲಿತಾಂಶ

ತಿಪಟೂರು: ನಗರದ ಕೆ.ಕೆ. ಕಾನ್ವೆಂಟ್ ಆಂಗ್ಲ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಈ ಬಾರಿಯ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇಕಡಾ 92 ಫಲಿತಾಂಶ ಬಂದಿದ್ದು, ಈ ಫಲಿತಾಂಶಕ್ಕೆ ನಮ್ಮ ಸಂಸ್ಥೆಯ ಎಲ್ಲ ಶಿಕ್ಷಕರು ಹೆಚ್ಚು ಶ್ರಮಿಸಿದ್ದಾರೆ. ಇದರ ಜೊತೆಗೆ ವಿದ್ಯಾರ್ಥಿಗಳ ಕಲಿಕೆ ಹಾಗೂ ಪೋಷಕರ ಸಹಕಾರ ಅತಿಮುಖ್ಯವಾಗಿದ್ದು ಎಲ್ಲರಿಗೂ ಧನ್ಯವಾದಗಳು ಎಂದು ಸಂಸ್ಥೆಯ ಕಾರ್ಯದರ್ಶಿ ತನ್ವೀರರುಲ್ಲಾ ಷರೀಪ್ ಹಾಗೂ ಪ್ರಾಂಶುಪಾಲರಾದ ಜಹೀರಾಜಬೀನ್ ತಿಳಿಸಿದ್ದಾರೆ. ಈ ಬಾರಿ ಒಟ್ಟು 45 ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆದು 41 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಕನ್ನಡದಲ್ಲಿ. ಆಲಿಯಾ ಬಾನು, ಮಹಮದ್ ಸೃಫುಲಾ ಇವರು ಅತೀ ಹೆಚ್ಚು ಅಂಕ ಅಂದರೆ 125 ಕ್ಕೆ 124 ಅಂಕ, ಗಣಿತ, ಹಿಂದಿ ಇಂಗ್ಲಿಷ್ ನಲ್ಲಿ 100ಕ್ಕೆ 100 ರಷ್ಟು ಶಾಲೆಗೆ ಫಲಿತಾಂಶ ಬರುವ ಮೂಲಕ ಶಾಲೆಯ ಕೀರ್ತಿ ಪತಾಕೆಯನ್ನು ವಿದ್ಯಾರ್ಥಿಗಳು ಹಾರಿಸಿದ್ದಾರೆ.



ಆಲಿಯಾ ಬಾನು,



ಮಹಮದ್



ನೂರ್ ಆರ್.ಬಿ.

ಮಹಿಳೆಯರಿಗೆ ಉದ್ಯೋಗ ದೊರೆಯಲಿ: ಕೆ.ಎನ್.ರಾಜಣ್ಣ

ನೀಲಕಂಠಾಪುರದಲ್ಲಿ ಪ್ರಾರಂಭವಾದ ಗಾರ್ಮೆಂಟ್ಸ್‌ನ 2ನೇ ಘಟಕ ಉದ್ಘಾಟಿಸಿದ ಅಶ್ವಿನಿ ಪುನೀತ್

• **ಕನ್ನಡಪ್ರಭ ವಾರ್ತೆ** ಮಧುಗಿರಿ

ಗ್ರಾಮೀಣ ಮಹಿಳೆಯರ ಮತ್ತು ಕುಟುಂಬದ ಜೀವನ ಮಟ್ಟ ಸುಧಾರಣೆಗೆ ಉದ್ಯೋಗ ಒದಗಿಸುವ ಮೂಲಕ ಹಳ್ಳಿಗಾಡಿನ ಪ್ರದೇಶಗಳಲ್ಲಿ ಗಾರ್ಮೆಂಟ್ಸ್ ಫ್ಯಾಕ್ಟರಿಗಳು, ಕೈಗಾರಿಕೆಗಳನ್ನು ಪ್ರಾರಂಭಿಸಿ ಎಂದು ಯುವ ಉದ್ಯಮಿಗಳಿಗೆ ಶಾಸಕ ಕೆ.ಎನ್.ರಾಜಣ್ಣ ಕರೆ ನೀಡಿದರು.

ತಾಲೂಕಿನ ಗಡಿಭಾಗದ ನೀಲಕಂಠಾಪುರದಲ್ಲಿ ನೂತನವಾಗಿ ಪ್ರಾರಂಭವಾದ ಗಾರ್ಮೆಂಟ್ಸ್ ನ 2 ನೇ ಘಟಕವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು. ಹಳ್ಳಿಗಾಡಿನ ಮಹಿಳೆಯರು ಪ್ರಸ್ತುತ ಹೈನೋದ್ಯಮ ಆರಂಭಿಸಿದ್ದು ಕ್ಷೇತ್ರದಲ್ಲಿ ಗಾರ್ಮೆಂಟ್ಸ್ ಉದ್ಯಮ ಪ್ರಾರಂಭಿಸಿದರೆ ಮತ್ತಷ್ಟು ಮಹಿಳೆಯರಿಗೆ ಉದ್ಯೋಗ ಸಿಗುವ ನಿರೀಕ್ಷೆಯಿದೆ. ಈ ಭಾಗವು ಮಳೆಯಾಶ್ರಿತ ಭೂಪ್ರದೇಶವಾಗಿದ್ದು ಉದ್ಯೋಗವಿಲ್ಲದಾಗಿದೆ. ಪ್ರಸ್ತುತ ಗಡಿಭಾಗದಲ್ಲಿ ಆಂಧ್ರ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ರಘುವೀರ ರೆಡ್ಡಿ ಕುಟುಂಬ ಹಾಗೂ ಮಧುಗಿರಿಯ ಯುವ ಉದ್ಯಮಿ ದಿಲೀಪ್ ಸೇರಿ ಈ ಗಾರ್ಮೆಂಟ್ಸ್ ಪ್ರಾರಂಭಿಸಿದ್ದು ,ಆಂಧ್ರ ಮತ್ತು ಕರ್ನಾಟಕದ ಗಡಿ ಭಾಗದ 300ಕ್ಕೂ ಅಧಿಕ ಮಹಿಳೆಯರಿಗೆ ಉದ್ಯೋಗ ಸಿಗುತ್ತಿದೆ. ಈಗಾಗಲೇ ಮಧುಗಿರಿಯಲ್ಲೂ ಒಂದು ಗಾರ್ಮೆಂಟ್ಸ್ ಪ್ರಾರಂಭಿಸಿ ಯಶಸ್ವಿಯಾಗಿದ್ದು ಈ ಭಾಗದಲ್ಲಿ ಇದೊಂದು ಮೈಲಿಗಲ್ಲಾಗಿದ್ದು, ಇಂತಹ ಮತ್ತಷ್ಟೂ ಗಾರ್ಮೆಂಟ್ಸ್ ಕೈಗಾರಿಕೆಗಳು ಹೆಚ್ಚು ಆರಂಭಗೊಂಡರೆ ನಿರುದ್ಯೋಗ ಸಮಸ್ಯ ನಿವಾರಣೆಗೆ ನಾಂದಿ ಹಾಡಿದಂತೆ. ಈ ನಿಟ್ಟಿನಲ್ಲಿ ನಿಮ್ಮ ಪ್ರಯತ್ನದಿಂದ ಈಗಿರುವ 300 ಉದ್ಯೋಗವು 3 ಸಾವಿರದಷ್ಟಾಗಲಿ. ಈ ಭಾಗದ ಜನರ ಪ್ರೀತಿ ಸಂಪಾದಿಸಿ ಉತ್ತಮ ಉದ್ಯಮಿಯಾಗಿ ಅಭಿವೃದ್ಧಿ ಆಗುವಂತೆ ತಿಳಿಸಿದ ಅವರು, ಡಾ. ರಾಜ್ ಕುಮಾರ್‌ಕುಟುಂಬದಿಂದ ಉದ್ಘಾಟನೆಗೊಂಡ ಪ್ರತಿಯೊಂದು ಉದ್ಯಮವೂ ಯಶಸ್ವಿಯಾಗಿರುವ ಉದಾಹರಣೆ ಸಾಕ್ಷಿದೆ. ಅದಕ್ಕಾಗಿ ಆ ಕುಟುಂಬದ ಹೆಣ್ಣುಮಗಳಿಂದ ಈ ಗಾರ್ಮೆಂಟ್ಸ್ ಉದ್ಘಾಟಿಸಿರುವುದು ಅರ್ಥಪೂರ್ಣವಾಗಿದೆ. ಈ ಉದ್ಯಮ ಮತ್ತಷ್ಟು ಗ್ರಾಮೀಣ ಮಹಿಳೆಯರ ಬಾಳು ಬೆಳಗುವಂತಾಗಲಿ ಎಂದು ಶುಭ ಕೋರಿದರು.



ಮಧುಗಿರಿಯ ಗಡಿ ಭಾಗದ ನೀಲಕಂಠಾಪುರದಲ್ಲಿ ನೂತನ ಲಕ್ಷ್ಮೀ ಗಾರ್ಮೆಂಟ್ಸ್ ಫ್ಯಾಕ್ಟರಿಯನ್ನು ಅಶ್ವಿನಿ ಪುನೀತ್ ರಾಜ್ಯ ಕುಮಾರ್ ಉದ್ಘಾಟಿಸಿದರು .ಶಾಸಕ ಕೆ.ನ್.ರಾಜಣ್ಣ , ರಘುವೀರರೆಡ್ಡಿ ಕುಟುಂಬದವರು ಇದ್ದಾರೆ.

■ ಇಂತಹ ಮತ್ತಷ್ಟೂ ಗಾರ್ಮೆಂಟ್ಸ್ ಕೈಗಾರಿಕೆಗಳು ಹೆಚ್ಚು ಆರಂಭಗೊಂಡರೆ ನಿರುದ್ಯೋಗ ಸಮಸ್ಯ ನಿವಾರಣೆಗೆ ನಾಂದಿ ಹಾಡಿದಂತೆ. ಈ ನಿಟ್ಟಿನಲ್ಲಿ ನಿಮ್ಮ ಪ್ರಯತ್ನದಿಂದ ಈಗಿರುವ 300 ಉದ್ಯೋಗವು 3 ಸಾವಿರದಷ್ಟಾಗಲಿ.

ಗಾರ್ಮೆಂಟ್ಸ್ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ರತ್ನ ಡಾ.ಪುನೀತ್ ರಾಜ್ ಕುಮಾರ್‌ಧರ್ಮಪತ್ನಿ ಅಶ್ವಿನಿ ಮಹಿಳೆಯರು ಸ್ವಾವಲಂಬಿ ಬದುಕನ್ನು ಬಯಸಲಿದ್ದು ಗ್ರಾಮದಲ್ಲೇ ಉದ್ಯೋಗ ಸಿಕ್ಕರೆ ಆರ್ಥಿಕವಾಗಿ ಬಹಳ ಸಧೃಡರಾಗುತ್ತಾರೆ. ಅಂತಹ ಮಹಿಳೆಯರಿಗಾಗಿ ಈ ಕೈಗಾರಿಕೆ ಉದ್ಘಾಟಿಸಿದ್ದು ಖುಷಿ ನೀಡಿದ್ದು ಎಲ್ಲರಿಗೂ ಒಳ್ಳೆಯದಾಗಲಿ ಎಂದರು.

ಈ ಸಂದರ್ಭದಲ್ಲಿ ಮಡಕಶಿರಾ ಮಾಜಿ ಶಾಸಕ ಸುಧಾಕರ್, ಕೈಗಾರಿಕೆ ಸಲಹೆಗಾರ ಸೋಮಶೇಖರ್ ಸ್ವಾಮಿ, ಶ್ರೀರಾಮ ರೆಡ್ಡಿ ಹಾಗೂ ಗೋವಿಂದರೆಡ್ಡಿ ಕುಟುಂಬ, ಕೈಗಾರಿಕೋದ್ಯಮಿಗಳಾದ ಜಗದೀಶ್, ಉಮಾ ಬಾಲಕೃಷ್ಣ, ದಿಲೀಪ್, ಎಐಸಿಸಿ ಸದಸ್ಯ ಶ್ರೀಧರ, ರಾಜಣ್ಣ, ಮಲ್ಲಿಕಾರ್ಜುನಯ್ಯ, ಕೃಷ್ಣ, ಪುರಸಭೆ ಮಾಜಿ ಸದಸ್ಯ ಶ್ರೀನಿವಾಸ್, ಹೊಸಕೆರೆ ದೇವರಾಜು, ವೇಣು, ಕೃಷ್ಣ ಗ್ರಾಮಸ್ಥರು ಹಾಜರಿದ್ದರು.

ನಾದೂರು ಗ್ರಾಮದಲ್ಲಿ ಭೀಮೋತ್ಸವ



ಶಿರಾ ತಾಲೂಕು ನಾದೂರು ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಪ್ರಯುಕ್ತ ಭೀಮೋತ್ಸವ ಕಾರ್ಯಕ್ರಮ ಅದ್ಧೂರಿಯಾಗಿ ಜರುಗಿತು.

• **ಕನ್ನಡಪ್ರಭ ವಾರ್ತೆ** ಶಿರಾ

ಶಿರಾ ತಾಲೂಕು ನಾದೂರು ಗ್ರಾಮದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಹಾಗೂ ಜೈಭೀಮ್ ಯೂತ್ಸ್ ನಾದೂರು ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್‌ಅವರ 135ನೇ ಜಯಂತಿ ಪ್ರಯುಕ್ತ ಭೀಮೋತ್ಸವ ಕಾರ್ಯಕ್ರಮ ಅದ್ಧೂರಿಯಾಗಿ ಜರುಗಿತು. ಕಾರ್ಯಕ್ರಮಕ್ಕೂ ಮುನ್ನ ಡಾ.ಬಿ.ಆರ್. ಅಂಬೇಡ್ಕರ್‌ಅವರ ಭಾವಚಿತ್ರವನ್ನು ಗ್ರಾಮದ ತುಂಬಾ ವಿವಿಧ ಕಲಾ ತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಪಂಚಾಯ್ತಿ ಪೌರ ಕಾರ್ಮಿಕರಿಗೆ ಹಾಗೂ ಎಸ್.ಎಸ್.ಎಲ್.ಸಿ. ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲಾಯಿತು. ಅಧ್ಯಕ್ಷತೆಯನ್ನು ದಸಂಸ ಜಿಲ್ಲಾಧ್ಯಕ್ಷ ಟೈರ್‌ರಂಗನಾಥ್ ವಹಿಸಿದ್ದರು. ಜೆಡಿಎಸ್ ಯುವ ಘಟಕದ ಅಧ್ಯಕ್ಷ ಪುನೀತ್ ಗೌಡ, ಉಪನ್ಯಾಸಕ ಡಾ. ಶಂಕರ್, ಯುವ ಕಾಂಗ್ರೆಸ್ ಮುಖಂಡ ತರೂರು ಮನೋಜ್, ರಂಗನಾಥ್ ಮೌರ್ಯ, ನಾದುರು ವಾಸುದೇವ್, ಶ್ರೀನಿವಾಸ್, ಮುಕುಂದೇಗೌಡ, ಮಂಜುನಾಥ್, ನಾದೂರು ಪಾಂಡು, ಕಿರಣ್, ನಾಗರಾಜ್, ಕೋದಂಡರಾಮು, ಕಮಲಮ್ಮ, ಸೋಮೇಲಿಂಗಪ್ಪ, ಸೇರಿದಂತೆ ಮುಖಂಡರು ಗ್ರಾಮಸ್ಥರು ಹಾಜರಿದ್ದರು.

ತಾರತಮ್ಯ ನಾಶವಾಗುವವರೆಗೂ ಅಂಬೇಡ್ಕರ್ ಜಯಂತಿಗೆ ಅರ್ಥವಿಲ್ಲ

ವಿಮರ್ಶಕ ರವಿಕುಮಾರ್ ನಿ. ಹಾ. ಅಭಿಪ್ರಾಯ



ತುರುವೇಕೆರೆ ತಾಲೂಕಿನ ಡಿ.ಕಲ್ಕೆರೆ ಗ್ರಾಮದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ನೂತನ ಶಾಖೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ರವಿಕುಮಾರ್‌ನಿ.ಹ ಉದ್ಘಾಟಿಸಿದರು.

ತುರುವೇಕೆರೆ: ನಮ್ಮ ನಮ್ಮಲ್ಲಿ ತಾರತಮ್ಯ ನಾಶವಾಗುವವರೆಗೂ, ಎದೆಯೊಳಗೆ ಸಮಾನತೆ ಮೂಡುವವರೆಗೂ, ಡಾ.ಅಂಬೇಡ್ಕರ್‌ಜಯಂತಿ ಮಾಡುವುದರಲ್ಲಿ ಅರ್ಥವಿಲ್ಲ ಎಂದು ಕನ್ನಡ ಅಭಿವೃದ್ದಿ ಪ್ರಾಧಿಕಾರದ ಸದಸ್ಯ ಹಾಗೂ ವಿಮರ್ಶಕ ರವಿಕುಮಾರ್ ನಿ. ಹಾ ಅಭಿಪ್ರಾಯಪಟ್ಟರು.

ತಾಲೂಕಿನ ದಂಡಿಶಿವರ ಹೋಬಳಿಯ ಡಿ.ಕಲ್ಕೆರೆ ಗ್ರಾಮದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ನೂತನ ಶಾಖೆ ಹಾಗೂ ಅಂಬೇಡ್ಕರ್‌ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು ಬಾಬಾಸಾಹೇಬರ ಜಯಂತಿಗಳನ್ನು ನಿರಂತರವಾಗಿ ಮಾಡಿಕೊಂಡೇ ಬರುತ್ತಿದ್ದೇವೆ. ಆದರೂ ದಮನಿತರ ಮೇಲೆ ಜಾತಿ, ದೌರ್ಜನ್ಯಗಳು, ಅವಮಾನಗಳು, ದೇವಸ್ಥಾನ ಪ್ರವೇಶ ನಿರಾಕರಣೆ, ಮಹಿಳಾ ದೌರ್ಜನ್ಯ, ಅತ್ಯಾಚಾರ, ಅವಕಾಶಗಳನ್ನು ವಂಚಿಸುವುದು ಇತ್ಯಾದಿಗಳು ಈಗಲೂ ನಡೆಯುತ್ತಿದೆ ಎಂದು ವಿಷಾದಿಸಿದರು.

ಉಪನ್ಯಾಸಕ ಚಂದ್ರಯ್ಯ ತೊರೆಮಾವಿನಹಳ್ಳಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಇಒ ಅನಂತರಾಜು ಕಾರ್ಯಕ್ರಮ ಉದ್ಘಾಟಿಸಿದರು. ತಾಲೂಕು ಸಂಚಾಲಕರಾದ ಮಲ್ಲೂರು ತಿಮ್ಮೇಶ್ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ದಂಡಿನಶಿವರ ಕುಮಾರ್, ರಾಜ್ಯ ಮಹಿಳಾ ಸಂಚಾಲಕಿ ಲಾವಣ್ಯ, ಜಿಲ್ಲಾ ಸಂಘಟನಾ ಸಂಚಾಲಕ ನಾಗರಾಜು ಉಪ್ಪಾರಳ್ಳಿ, ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಚಿದಾನಂದ್, ಮುಖಂಡರಾದ ಮುತ್ತಣ್ಣ, ನಯಾಜ್ ಪಾಷಾ, ತಿಪಟೂರು ಕೊಪ್ಪ ಶಾಂತಣ್ಣ, ತಾಲ್ಲೂಕಿನ ಮುಖಂಡರು. ಗಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಉಪನ್ಯಾಸಕ ಕೆ.ಟಿ.ಶ್ರೀನಿವಾಸ್ ಕಾರ್ಯಕ್ರಮ ನಿರೂಪಿಸಿದರು.

ಕ್ರೀಡೋತ್ಸವ | ಸರ್ಕಾರಿ ಪದವಿಪೂರ್ವ ಕಾಲೇಜು ಮೈದಾನದಲ್ಲಿ ರಾಜ್ಯ ಮಟ್ಟದ ಕಬಡ್ಡಿ ಜಾತ್ರೆಯಲ್ಲಿ ಸಚಿವ ಪರಂ

ದೈಹಿಕ ಮಾನಸಿಕ ಸದೃಢತೆಗೆ ಕ್ರೀಡೆಗಳು ಅವಶ್ಯ: ಪರಮೇಶ್ವರ್

• **ಕನ್ನಡಪ್ರಭ ವಾರ್ತೆ** ಕೊರಟಗೆರೆ

ಯುವ ಪೀಳಿಗೆ ಮಾನಸಿಕ ಹಾಗೂ ದೈಹಿಕ ಸದೃಡವಾಗಿರಬೇಕಾದರೆ ಕ್ರೀಡೆಗಳಲ್ಲಿ ಹೆಚ್ಚು ಭಾಗವಹಿಸಿದಾಗ ಮಾತ್ರ ಯಾವುದೇ ದುಷ್ಚಟಗಳಿಂದ ದೂರ ಇರಲು ಸಾಧ್ಯ ಎಂದು ಗೃಹ ಸಚಿವ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್‌ತಿಳಿಸಿದರು.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜು ಮೈದಾನದಲ್ಲಿ ಡಾ.ಜಿ.ಪರಮೇಶ್ವರ್‌ಯುವ ಪಡೆಯಿಂದ ಏರ್ಪಡಿಸಲಾಗಿದ್ದ ಜಿಲ್ಲಾ ಮತ್ತು ರಾಜ್ಯ ಮಟ್ಟದ ಕಬಡ್ಡಿ ಜಾತ್ರೆಯ ಪರಮೇಶ್ವರ್‌ಕಪ್ ಪಂದ್ಯಾವಳಿಗಳನ್ನು ವೀಕ್ಷಿಸಿ ಮಾತನಾಡಿ ದರು.

ರಾಜ್ಯದಲ್ಲಿ ತುಮಕೂರು ಬೆಂಗಳೂರಂತೆ ವೇಗವಾಗಿ ಬೆಳೆಯುತ್ತಿದ್ದು ಆದರಂತೆ ನಮ್ಮ ತುಮಕೂರಿನಲ್ಲಿ ಎಲ್ಲಾ ರೀತಿಯ ಅಂತರ ರಾಷ್ಟೀಯ ಮಟ್ಟದ ಕ್ರೀಡೆಗಳನ್ನು ಆಯೋಜಿಸಲಾಗಿದೆ. ಪ್ರಸ್ತುತ ತುಮಕೂರಿನಲ್ಲಿ ನಡೆಯುತ್ತಿರುವ ಅಂತಾರಾಷ್ಟ್ರೀಯ ಟೆನಿಸ್ ಪಂದ್ಯ ಆಡುವುದಕ್ಕೆ ಈಗಾಗಲೇ ಸುಮಾರು 30 ದೇಶಗಳಿಂದ 100 ಕ್ಕೂ ಹೆಚ್ಚು ಮಹಿಳಾ ಟೆನಿಸ್ ಆಟಗಾರ್ತಿಯರು ಆಗಮಿಸಿದ್ದಾರೆ ಎಂದು ತಿಳಿಸಿದರು.

ಇಂದಿನಿಂದ ಪ್ರಾರಂಭವಾಗುವ ಕ್ರೀಡಾಕೂಟ 10ರ ವರೆಗೆ ಪಂದ್ಯಗಳು ನಡೆಯಲಿದ್ದು, ತುಮಕೂರು ಜಿಲ್ಲೆಯ ಕ್ರೀಡಾಭಿಮಾನಿಗಳು ಎಲ್ಲರು ವೀಕ್ಷಿಸುವ ಮೂಲಕ ತಮ್ಮ ಮಕ್ಕಳಲ್ಲಿ ಕ್ರೀಡೆಗೆ ಹೆಚ್ಚು ಆಸಕ್ತಿ ಬೆಳಸಿಕೊಳ್ಳವಂತೆ ಮಾಡಬೇಕಿದೆ. ಕಳೆದ ವಾರದ ಹಿಂದೆ ಅಂತಾರಾಷ್ಟೀಯ ಮಟ್ಟದ ಕ್ರೀಡಾಪಟುಗಳ ಆಯ್ಕೆಯೂ ಸಹ ತುಮಕೂರಿನಲ್ಲಿ ನಡೆದಿದೆ. ಅದೇ ರೀತಿ ಕೊರಟಗೆರೆಯಲ್ಲಿ ರಾಷ್ಟೀಯ, ರಾಜ್ಯ ಮಟ್ಟದ ಕಬ್ಬಡ್ಡಿಗಳನ್ನು, ರಾಜ್ಯ ಮಟ್ಟದ ಕ್ರಿಕೆಟ್, ವಾಲಿಬಾಲ್ ಪಂದ್ಯವಳಿಗಳನ್ನು ನಮ್ಮ ಯುವ ಪಡೆಯ ಯುವಕರು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ ಎಂದರು.

ಕೊರಟಗೆರೆಯಲ್ಲಿ ಈಗಾಗಲೇ 6.5 ಕೋಟಿಗಳ ವೆಚ್ಚದಲ್ಲಿ ಒಳ ಕ್ರೀಡಾಂಗಣ ನಿರ್ಮಿಸಲಾಗಿದೆ, 3.5 ಕೋಟಿ ರುಗಳ ವೆಚ್ಚದಲ್ಲಿ ಹೊರ ಕ್ರೀಡಾಂಗಣವನ್ನು ಅಭಿವೃದ್ದಿ ಪಡಿಸಲು ಹಣ ಬಿಡುಗಡೆ ಮಾಡಲಾಗಿದೆ. ಈಗಿನ ಯುವಕರು ವ್ಯಸನಗಳಿಗೆ ಬಲಿಯಾಗಿ ಜೀವನನ್ನು ಹಾಳು ಮಾಡಿಕೊಳ್ಳದೆ ಕ್ರೀಡೆಗಳಲ್ಲಿ ಭಾಗವಹಿಸಿ ಸದೃಡರಾಗಬೇಕಿದೆ. ಇದರಿಂದ ಉತ್ತಮ ಸಮಾಜ ಬಲಿಷ್ಟ ಭಾರತ ನಿರ್ಮಾಣವಾಗಲಿದೆ, ಈ ಕಬ್ಬಡ್ಡಿ ಪಂದ್ಯವಳಿಗಳಲ್ಲಿ ಭಾಗವಹಿಸರುವ ಆಟಗಾರರು ಮತ್ತು ಆಟಗಾರ್ತಿಯರಿಗೆ ಶುಭಕೋರಿದ ಅವರು ತೀರ್ಪುಗಾರರು ನಿಪಕ್ಷಪಾತವಾಗಿ ತೀರ್ಪು ನೀಡುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ತುಮಕೂರು ಎಸ್ಪಿ ಅಶೋಕ್, ತಹಸೀಲ್ದಾರ್‌ಮಂಜುನಾಥ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೊಡ್ಲಹಳ್ಳಿ ಅಶ್ವಥನಾರಾಯಣ, ಅರಕೆರೆ ಶಂಕರ್, ಮಹಿಳಾ ಅಧ್ಯಕ್ಷೆ ಜಯಮ್ಮ, ಮುಖಂಡರಾದ ಎ.ಡಿ. ಬಲರಾಮಯ್ಯ, ಮಹಾಲಿಂಗಪ್ಪ, ವೆಂಕಟೇಶ್, ಎಲ್.ರಾಜಣ್ಣ, ಓಬಳರಾಜು, ಮುನ್ನಬಾಯ್, ಭೀಮರಾಜು, ಪ್ರಭಾಕರ್, ಯುವಪಡೆಯ ವಿನಯ್‌ಕುಮಾರ್, ಅರವಿಂದ್, ಅಮರ್, ದೀಪಕ್, ಸೂಫಿಯಾನ್, ಗೋಪಿನಾಥ್, ಸ್ಪೋರ್ಟ್‌ಮಂಜು, ಗಣೇಶ್, ರಾಖಿ, ದರ್ಶನ್, ಸೇರಿದಂತೆ ಇತರರು ಇದ್ದರು.



ಕೊರಟಗೆರೆ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ನಡೆದ ಕಬ್ಬಡ್ಡಿ ಪಂದ್ಯಾವಳಿಗಳಲ್ಲಿ ಕ್ರೀಡಾಪಟುಗಳ ಜೊತೆ ಗೃಹ ಸಚಿವ ಡಾ.ಜಿ.ಪರಮೇಶ್ವರ ಸೇರಿದಂತೆ ಇತರರು.

■ ತುಮಕೂರು ಜಿಲ್ಲೆಯ ಕ್ರೀಡಾಭಿಮಾನಿಗಳು ಎಲ್ಲರು ವೀಕ್ಷಿಸುವ ಮೂಲಕ ತಮ್ಮ ಮಕ್ಕಳಲ್ಲಿ ಕ್ರೀಡೆಗೆ ಹೆಚ್ಚು ಆಸಕ್ತಿ ಬೆಳಸಿಕೊಳ್ಳವಂತೆ ಮಾಡಬೇಕಿದೆ.

ಸುದ್ದಿ ಸಿಂಚನ

23ನೇ ವಾರ್ಷಿಕೋತ್ಸವ

ಗುಬ್ಬಿ : ಪಟ್ಟಣದ ಮಹಾಲಕ್ಷ್ಮಿ ನಗರದ ಶ್ರೀ ಮಹಾಲಕ್ಷ್ಮಿ ಅಮ್ಮನವರ 23ನೇ ವರ್ಷದ ವಾರ್ಷಿಕೋತ್ಸವ ಭಾನುವಾರ ವಿಜೃಂಭಣೆಯಿಂದ ಜರುಗಿತು. ಅ ರ್ಚಕ ಆನಂದ್ ಅವರು



ಪೂಜಾ ಕೈಕಂರ್ಯಗಳನ್ನು ಮಾಡಿದರು. ಸಂಜೆ ಪಟ್ಟಣದ ರಾಜಬೀದಿಗಳಲ್ಲಿ ಅಮ್ಮನವರನ್ನು ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿ ಲಿಂಗದ ವೀರರ ಕುಣಿತ ಹಾಗೂ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಉತ್ಸವ ನಡೆಸಲಾಯಿತು. ವಾರ್ಷಿಕೋತ್ಸವಕ್ಕೆ ಆಗಮಿಸಿದ ಎಲ್ಲಾ ಮಹಿಳೆಯರಿಗೆ ಹೂ, ಕುಂಕುಮ, ಹಸಿರು ಬಳೆ, ಸೀರೆ ಹಾಗೂ ಪ್ರಸಾದ ವಿತರಿಸಲಾಯಿತು. ಸಮಾರಂಭದಲ್ಲಿ ಶ್ರೀಲಕ್ಷ್ಮೀದೇವಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ನಾಗರಾಜುಚಾರ್, ಉಪಾಧ್ಯಕ್ಷ ಎಸ್.ಉಮೇಶ್, ಕಾರ್ಯದರ್ಶಿ ವಾಸುದೇವಚಾರ್, ಖಜಾಂಚಿ ಎಸ್. ರಾಜಶೇಖರ್‌ಚಾರ್, ಗುರುರಾಜ್, ಯಶೋಧಮ್ಮ, ಮರಿಬಸಪ್ಪಚಾರ್, ವಿಶ್ವಕರ್ಮ ಸಮಾಜದ ಅಧ್ಯಕ್ಷ ಕಮಲನಾಭಾಚಾರ್, ನವೀನ್ ಕುಮಾರ್, ಮುಖಂಡ ನಾಗರಾಜು, ಮಂಜುನಾಥ್,ಜಿ.ಎನ್.ಬೆಟ್ಟಸ್ವಾಮಿ, ಮಾಜಿ ಸದಸ್ಯರಾದ ಶಿವಕುಮಾರ್, ಕೃಷ್ಣಪ್ಪ, ಹಾಗೂ ದೇವಸ್ಥಾನದ ಟ್ರಸ್ಟಿನ ಎಲ್ಲಾ ಪದಾಧಿಕಾರಿಗಳು, ವಿಶ್ವಕರ್ಮ ಸಮಾಜದ ಬಂಧುಗಳು, ಗುಬ್ಬಿ ನಗರದ ಭಕ್ತಾದಿಗಳು ಹಾಗೂ 18 ಕೋಮಿನ ಮುಖಂಡರು ಮತ್ತಿತರರು ಇದ್ದರು.

ಮಾಜಿ ಎಂಪಿ ಜಿಎಸ್ಬಿ ಜನ್ಮದಿನ ಇಂದು

ತುಮಕೂರು: ಮಾಜಿ ಸಂಸದ ಜಿ.ಎಸ್. ಬಸವರಾಜು ಅವರ 87ನೇ ಹುಟ್ಟು ಹಬ್ಬವನ್ನು ಈ ತಿಂಗಳ 4ರಂದು ಅವರ ಅಭಿನಂದನಾ ಬಳಗ ಆಚರಿಸುತ್ತಿದೆ. 5 ಬಾರಿ ತುಮಕೂರು ಕ್ಷೇತ್ರದ ಸಂಸದರಾಗಿ, ನೀರಾವರಿ ಹರಿಕಾರರಾಗಿ, ಹಲವಾರು ದೇವಾಲಯ ಮತ್ತು ಮಠಮಾನ್ಯಗಳ ಮಹಾಪೋಷಕರು ಸರ್ವಜನಾಂಗದ ಜನಾನುರಾಗಿಯೂ ಆಗಿರುವ ಜಿ.ಎಸ್.ಬಸವರಾಜುರವರ 87ನೇ ವಸಂತಕ್ಕೆ ಕಾಲಿಡುತ್ತಿದ್ದಾರೆ.

ಸೇಂಟ್ ಮೇರೀಸ್ ಶಾಲೆಗೆ ಶೇ.100 ಫಲಿತಾಂಶ

ತುರುವೇಕೆರೆ: ತಾಲೂಕಿನ ಗ್ರಾಮಾಂತರ ಪ್ರದೇಶವಾಗಿರುವ ದೊಡ್ಡೇನಹಳ್ಳಿಯ ಸೇಂಟ್



ಮೇರೀಸ್ ಶಾಲೆ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಪ್ರಸಕ್ತ ವರ್ಷ ಶೇಕಡಾ 100 ರಷ್ಟು ಫಲಿತಾಂಶ ಗಳಿಸಿದೆ. ಸಿಂಚನ ಜೆ 625 ಅಂಕಗಳಿಗೆ 609 ಅಂಕಗಳಿಸಿ ಶೇ 97.44 ರಷ್ಟು ಫಲಿತಾಂಶ ಪಡೆದು ಶಾಲೆಗೆ ಕೀರ್ತಿ ತಂದಿದ್ದಾಳೆ. ಜೆ. ಸಿಂಚನ, ದೀಪ್ತಿ ಜಿ, ಶ್ರೀಲಕ್ಷ್ಮೀ ಮತ್ತು ಗಗನ ಡಿಸ್ಟಿಂಕ್ಷನ್ ಫಲಿತಾಂಶ ಪಡೆದಿದ್ದಾರೆ. ಈ ಶಾಲೆ ಶಿಕ್ಷಣ ಇಲಾಖೆಯಿಂದ ಎ ಗ್ರೇಡ್ ಶಾಲೆ ಎಂಬ ಕೀರ್ತಿಗೂ ಪಾತ್ರವಾಗಿದೆ. ಉತ್ತಮ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ, ಸಂಸ್ಥೆಯ ಚೇರ್ಮನ್ ಪ್ರೊ. ಗಂಗಾಧರ ದೇವರಮನೆ, ಕಾರ್ಯದರ್ಶಿ ಶರಿತ ದೇವರಮನೆ ಮತ್ತು ಮುಖ್ಯೋಪಾಧ್ಯಾಯಿನಿ ಮಮತಾ ಎಂ.ಎಸ್ ಅಭಿನಂದಿಸಿದ್ದಾರೆ.

ಬಿ.ಜಿ.ಪುಟ್ಟಮ್ಮ ನಿಧನ

ತುಮಕೂರು: ಮಾಜಿ ಸಂಸದ ದಿವಂಗತ ಕೆ. ಲಕ್ಕಪ್ಪ



ಅವರ ಪತ್ನಿ ಬಿ.ಜಿ .ಪುಟ್ಟಮ್ಮ ಅವರು ಭಾನುವಾರ ಮಧ್ಯಾಹ್ನ 3 ಗಂಟೆಗೆ ನಗರದ ತಮ್ಮ ಸ್ವಗೃಹದಲ್ಲಿ ನಿಧನರಾದರು, ನಗರದ ಖಾಸಗಿ ಆಸ್ಪತ್ರೆಯಲ್ಲಿ ವಯೋಸಹಜ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿದ್ದರು. ಶನಿವಾರ ಬೆಳಿಗ್ಗೆಯಷ್ಟೇ ಅಲ್ಲಿಂದ ಮನೆಗೆ ಬಂದಿದ್ದರು. ಮೃತರು ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 11 ಗಂಟೆಗೆ ಗೂಳೂರು ಸಮೀಪದ ಕೊಂಡಾಪುರದ ಹತ್ತಿರ ಇರುವ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚನ್ನಬಸವೇಗೌಡ ನಿಧನ

ಗುಬ್ಬಿ: ತಾಲೂಕಿನ ಅಡಗೂರು ಗ್ರಾಮದ ನಿವೃತ್ತ ಶಿಕ್ಷಕ



ಚನ್ನಬಸವೇಗೌಡ (79) ರವರು ಅನಾರೋಗ್ಯದಿಂದ ಭಾನುವಾರ ನಿಧನರಾದರು. ಮೃತರಿಗೆ ಪತ್ನಿ, ಓರ್ವ ಪುತ್ರ ಹಾಗೂ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಮೃತರ ಅಂತ್ಯ ಕ್ರಿಯೆ ಭಾನುವಾರ ಸಂಜೆ ಅವರ ತೋಟದಲ್ಲಿ ನೆರವೇರಿತು.

ವಿಶ್ವ ಮಹಿಳಾ ಟೆನ್ನಿಸ್ ಟೂರ್ನಿಗೆ ತುಮಕೂರು ಸಜ್ಜು

ನಾಳೆಯಿಂದ ಆರಂಭ, 8 ದೇಶಗಳ 78 ಆಟಗಾರರು ಭಾಗಿ: ಗೃಹ ಸಚಿವ ಪರಮೇಶ್ವರ್‌ಮಾಹಿತಿ

• **ಕನ್ನಡಪ್ರಭ ವಾರ್ತೆ,** ತುಮಕೂರು

ತುಮಕೂರು ನಗರದಲ್ಲಿ ಎಟಿಎಫ್ ರ್ಯಾಂಕಿಂಗ್ ವಿಶ್ವ ಮಹಿಳಾ ಟೆನ್ನಿಸ್ ಕ್ರೀಡಾಕೂಟ ಆರಂಭ ವಾಗಿದ್ದು, ತುಮಕೂರು ಓಪನ್ ಹೆಸರಿನಲ್ಲಿ ಪ್ರತಿ ವರ್ಷ ನಡೆಯಲಿದೆ. 5 ರಂದು ಐಟಿಎಫ್ ಮಹಿಳಾ ಟೆನ್ನಿಸ್ ಟೂರ್ನಿ ಡಬ್ಲು 35 ಉದ್ಘಾಟನೆಗೊಳ್ಳಲಿದೆ ಎಂದು ಕರ್ನಾಟಕ ರಾಜ್ಯ ಅಥ್ಲೆಟಿಕ ಅಸೋಸಿಯೇಷನ್ ಅಧ್ಯಕ್ಷ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ್‌ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, 20ರ್ಷಗಳ ತರುವಾಯ ಮತ್ತೊಮ್ಮೆ ತುಮಕೂರು ವಿಶ್ವ ಟೆನ್ನಿಸ್ ಭೂಪಟದಲ್ಲಿ ತನ್ನ ಹೆಸರನ್ನು ಶಾಶ್ವತವಾಗಿ ಪಡೆದುಕೊಳ್ಳುತಿದ್ದು, ಯುದ್ಧದ ಕಾರ್ಮೋಡದ ನಡುವೆಯೂ ಎಂಟು ದೇಶಗಳ ಸುಮಾರು 78 ಆಟಗಾರರು ಈ ಟೂರ್ನಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ಐಟಿಎಫ್ ಮಹಿಳಾ ಡಬ್ಲ್ಯು 35 ಟೂರ್ನಿಯಲ್ಲಿ 30 ಸಾವಿರ ಡಾಲರ್ ಬಹುಮಾನದ ಮೊತ್ತವನ್ನು ನೀಡಲಾಗಿದ್ದು,ಇಷ್ಟು ಬಹುಮಾನದ ಮೊತ್ತವನ್ನು ಶ್ರೀಸಿದ್ದಾರ್ಥ ಶಿಕ್ಷಣ ಸಂಸ್ಥೆ ವತಿಯಿಂದ ದೇಣಿಗೆ ನೀಡುವ ಮೂಲಕ ಕ್ರೀಡಾಕೂಟವನ್ನು ಪ್ರೋತ್ಸಾಹಿಸುತ್ತಿದೆ ಎಂದರು.

ಪ್ರಸ್ತುತ ನಡೆಯುವ ಐಟಿಎಫ್ ವಿಶ್ವ ಮಹಿಳಾ ಟೆನ್ನಿಸ್ ಟೂರ್ನಿ ಡಬ್ಲ್ಯು 35ಗಾಗಿ ನಾಲ್ಕು ಅಂಕಣಗಳು ಸಿದ್ದಗೊಂಡಿದ್ದು, ಮೂರು ಅಂಕಣಗಳಲ್ಲಿ ಪಂದ್ಯಾವಳಿ ನಡೆದರೆ, ಒಂದು ಅಂಕಣವನ್ನು ಅಭ್ಯಾಸಕ್ಕೆ ಮೀಸಲಿಡಲಾಗಿದೆ. ಏಕಕಾಲಕ್ಕೆ ನಾಲ್ಕು ಸಾವಿರ ಜನರು ಕುಳಿತು ನೋಡಬಹುದು, ಅಲ್ಲದೆ 200 ದೇಶಗಳಿಗೆ ಲೈವ್ ಪ್ರಸಾರಗೊಳ್ಳಲಿದೆ. ಕ್ರೀಡಾಕೂಟದಲ್ಲಿ ಕರ್ನಾಟಕದ 10 ಜನ ಟೆನ್ನಿಸ್ ತಾರೆಯರು ಪಾಲ್ಗೊಳ್ಳುತ್ತಿದ್ದು, ಇವರಲ್ಲಿ ತುಮಕೂರು ಜಿಲ್ಲೆಯ ಮೇಘನಾ ಮತ್ತು



ಶ್ರೀಸಿದ್ದಾರ್ಥ ಶಿಕ್ಷಣ ಸಂಸ್ಥೆ ವತಿಯಿಂದ ಬಹುಮಾನ ಮೊತ್ತವನ್ನು ದೇಣಿಗೆ ನೀಡುವ ಮೂಲಕ ಕ್ರೀಡಾಕೂಟಕ್ಕೆ ಶುಭ ಕೋರಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್ .

ಸೋಹಾ ಸಾಧಿಕ್ ಸಹ ಸೇರಿದ್ದಾರೆ. ಸ್ಥಳೀಯ ಟೆನ್ನಿಸ್ ತಾರೆಯನ್ನು ಹುಟ್ಟು ಹಾಕಲು ಇದೊಂದು ಪ್ರಮುಖ ವೇದಿಕೆಯಾಗಲಿದೆ ಎಂದರು.

ಅಖಿಲ ಭಾರತ ಟೆನಿಸ್ ಅಸೋಸಿಯೇಷನ್ (ಎಐಟಿಎ) ಯ ಜಂಟಿ ಕಾರ್ಯದರ್ಶಿ ಮತ್ತು ಕೆಎಸ್‌ಎಲ್ ಟಿಎ ಜಂಟಿ ಕಾರ್ಯದರ್ಶಿ ಸುನಿಲ್ ಯಜಮಾನ್ ಮಾತನಾಡಿ, ಈ ಪಂದ್ಯಾವಳಿಯು ಕರ್ನಾಟಕದಾದ್ಯಂತ ಟೆನಿಸ್‌ನ ಹೆಜ್ಜೆಗುರುತನ್ನು ವಿಸ್ತರಿಸುವ ದೀರ್ಘ ಕಾಲೀನ ದೃಷ್ಟಿಕೋನದ ಭಾಗವಾಗಿದೆ. ತುಮಕೂರಿನಂತಹ ನಗರಗಳಿಗೆ ಅಂತಾರಾಷ್ಟ್ರೀಯ ಕಾರ್ಯಕ್ರಮಗಳನ್ನು ಕೊಂಡೊಯ್ಯುವ ಮೂಲಕ ನಾವು ಆಟಗಾರರಿಗೆ ಅವಕಾಶಗಳನ್ನು ಸೃಷ್ಟಿಸುತ್ತಿದ್ದೇವೆ,.ಹೊಸ ಪ್ರೇಕ್ಷಕರನ್ನು ತೊಡಗಿಸಿಕೊಳ್ಳುತ್ತಿದ್ದೇವೆ ಎಂದರು.

ನಾಲ್ಕು ವೈಲ್ಡ್ ಕಾರ್ಡ್‌ಗಳು ಸೇರಿದಂತೆ 24 ಆಟಗಾರರು ನೇರ ಪ್ರವೇಶವನ್ನು ಪಡೆದಿದ್ದರೆ, ಇನ್ನೂ 32 ಆಟಗಾರರು ಉಳಿದ ಎಂಟು ಸ್ಥಾನಗಳಿಗಾಗಿ ಹೋರಾಡಲಿದ್ದಾರೆ. ಈ ಪಂದ್ಯಾವಳಿಯು ಉತ್ತಮ-ಗುಣಮಟ್ಟದ ಕ್ರಿಯೆಯ ಭರವಸೆ ನೀಡುತ್ತದೆ ಮತ್ತು ಭಾರತೀಯ ಅಭಿಮಾನಿಗಳಿಗೆ ಜಾಗತಿಕ ಪ್ರತಿಭೆಗಳ ಮುಂದಿನ ಅಲೆಯನ್ನು ಹತ್ತಿರದಿಂದ ವೀಕ್ಷಿಸುವ ಅವಕಾಶವನ್ನು ನೀಡುತ್ತದೆ ಎಂದು ಸುನಿಲ್ ಯಜಮಾನ್ ತಿಳಿಸಿದರು.

ಇದೇ ವೇಳೆ ವಿಶ್ವ ಮಹಿಳಾ ಟೆನ್ನಿಸ್ ಟೂರ್ನಿಯ ನಗದು ಬಹುಮಾನವಾದ 30 ಸಾವಿರ ಯುಎಸ್ ಡಾಲರ್‌ಹಣದ ಚೆಕ್‌ನ್ನು ಶ್ರೀಸಿದ್ದಾರ್ಥ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯೂ ಆದ ಡಾ.ಜಿ.ಪರಮೇಶ್ವರ್‌ಅವರು ರಾಜ್ಯ ಲಾನ್ ಟೆನ್ನಿಸ್ ಅಸೋಸಿಯೇಷನ್ ಕಾರ್ಯದರ್ಶಿ ಹಾಗೂ ಟೂರ್ನಿ ಸಂಯೋಜಕರಿಗೆ ಹಸ್ತಾಂತರಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಎಸ್ಪಿ ಅಶೋಕ್ ವೆಂಕಟ್,ನಿರ್ದೇಶಕರಾದ ಅಮರನಾಥ್ ಪಾಲ್ಗೊಂಡಿದ್ದರು.

ತುಮಕೂರು ಓಪನ್‌ನಲ್ಲಿ ಸೋಹಾ ಸಾಧಿಕ್ ಭಾಗಿ



• **ಕನ್ನಡಪ್ರಭ ವಾರ್ತೆ** ಗುಬ್ಬಿ

ತುಮಕೂರು ನಗರದಲ್ಲಿ ನಡೆಯುತ್ತಿರುವ ಅಂತಾರಾಷ್ಟ್ರೀಯ ಟೆನಿಸ್ ಟೂರ್ನಿ ಮೆಂಟ್ ನಲ್ಲಿ ಗುಬ್ಬಿ ತಾಲೂಕಿನ ಕ್ರೀಡಾಪಟು ಆಯ್ಕೆಯಾಗಿ ಸ್ಪರ್ಧೆ ಮಾಡುತ್ತಿರುವುದು ತಾಲೂಕಿನ ಜನತೆಗೆ ಸಂತೋಷ ತಂದಿದೆ ಎಂದು ನಾಗರಿಕರ ಹಿತರಕ್ಷಣ ಸಮಿತಿಯ ಅಧ್ಯಕ್ಷ ಎಚ್.ಡಿ. ಯಲ್ಲಪ್ಪ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುಬ್ಬಿ ಚನ್ನಬಸವೇಶ್ವರ ಯುವಕರ ಸಂಘ ಹಾಗೂ ಕ್ರೀಡಾ ಪ್ರೋತ್ಸಾಹಕರು ಹಮ್ಮಿಕೊಂಡಿದ್ದ ಅಭಿನಂದನ ಸಮಾರಂಭದಲ್ಲಿ ಮಾತನಾಡಿದ ಅವರು, ತಾಲೂಕಿನ ಇಸ್ಲಾಂಪುರ ಗ್ರಾಮದ ಸೋಹಾ ಸಾಧಿಕ್ ರವರು ರಾಂಕಿಂಗ್ ಶ್ರೇಣಿಯಲ್ಲಿ ಆಯ್ಕೆಯಾಗಿ ಕ್ರೀಡೆಯಲ್ಲಿ ಭಾಗವಹಿಸುತ್ತಿರುವುದು ನಮ್ಮೆಲ್ಲರ ಹೆಮ್ಮೆಯ ಸಂಗತಿಯಾಗಿದೆ ಎಂದು ತಿಳಿಸಿದರು.

ಚನ್ನಬಸವೇಶ್ವರಕ್ರೀಡಾ ಯುವಕರಸಂಘದಸಂಸ್ಥಾಪಕಕಾರ್ಯದರ್ಶಿ ಶಂಕರ್‌ಕುಮಾರ್‌ಮಾತನಾಡಿ, ಇವರ ತಂದೆಯು ಕ್ರೀಡಾಪಟು ಆಗಿದ್ದು, ಅವರ ಪ್ರೋತ್ಸಾಹದಲ್ಲಿ ಸೋಹಾ ಸಾಧಿಕ್ ಈ ಮಟ್ಟಕ್ಕೆ ಬರಲು ಕಾರಣಕರ್ತರಾಗಿದ್ದಾರೆಎಂದುತಿಳಿಸಿದರು. ಕ್ರೀಡಾಪಟುಸೋಹಸಾಧಿಕ್‌ಮಾತನಾಡಿ, ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಯನ್ನು ಬೇರೆ ದೇಶಕ್ಕೆ ಹೋಗಿ ಹಾಡುವ ಬದಲು ನಮ್ಮ ಸ್ಥಳೀಯ ಜಿಲ್ಲೆ ತುಮಕೂರಿನಲ್ಲಿ ಭಾಗವಹಿಸುತ್ತಿರುವುದು ನನಗೆ ಖುಷಿ ತಂದಿದೆ. ನಾನು ಮೂರು ಬಾರಿ ರಾಷ್ಟ್ರಮಟ್ಟದಲ್ಲಿ ಚಿನ್ನದ ಪದಕ ಪಡೆದಿದ್ದೇನೆ. ಐದು ಬಾರಿ ಅಂತರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಫೈನಲ್ ಲಿಸ್ಟ್ ಆಗಿದ್ದೇನೆ. ತುಮಕೂರಿನಲ್ಲಿ ನಡೆಯುವ ಡಬ್ಲ್ಯೂ 35 ಟೂರ್ನಿಯಲ್ಲಿ ಆಡುವುದಕ್ಕೆ ಅವಕಾಶ ಸಿಕ್ಕಿರುವುದು ನನ್ನ ಭಾಗ್ಯ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮುಖಂಡ ಎಚ್.ಟಿ ಭೈರಪ್ಪ, ಸಹ ಸಾಧಿಕ್, ಮಹಮದ್ ಸಾಧಿಕ್, ಕ್ರೀಡಾ ತರಬೇತಿದಾರ ವಸೀಂ ಅನ್ವರ್, ಗಿರೀಶ್ , ಕ್ರೀಡಾ ಪ್ರೋತ್ಸಾಹಕರು ಮತ್ತಿತರರು ಇದ್ದರು.

ಪರಿಹಾರ ನೀಡದೆ ರೈಲ್ವೆ ಕಾಮಗಾರಿ: ರೈತ ಸಂಘ ಆಕ್ರೋಶ

ಗೊಲ್ಲರಹಟ್ಟಿಯ ಕಾಡುಗೊಲ್ಲರನ್ನು ಭೇಟಿ ಮಾಡಿ ಸಮಸ್ಯೆ ಆಲಿಸಿದ ರೈತ ಮುಖಂಡ ನಾದೂರು ಕೆಂಚಪ್ಪ

• **ಕನ್ನಡಪ್ರಭ ವಾರ್ತೆ** ಶಿರಾ

ತುಮಕೂರು-ದಾವಣಗೆರೆ ರೈಲ್ವೆ ಮಾರ್ಗ ಕಾಮಗಾರಿ ಶಿರಾ ತಾಲೂಕಿನ ಲಕ್ಷ್ಮಿ ಸಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದ್ವಾರಾಳ ಗೊಲ್ಲರಹಟ್ಟಿಯ ಹತ್ತಿರನಡೆಯುತ್ತಿದ್ದು, ಕಾಡುಗೊಲ್ಲಸಮುದಾಯದ 11 ಮನೆಗಳು ಹಾಗೂ 1 ದೇವಸ್ಥಾನಕ್ಕೆ ಪರಿಹಾರ ನೀಡದೆ, ತೆರವು ಮಾಡಲು ಮುಂದಾದ ಭೂ ಸ್ವಾಧೀನ ಅಧಿಕಾರಿಗಳ ವಿರುದ್ಧ ರೈತರು , ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದರು.

ಗೊಲ್ಲರಹಟ್ಟಿಯ ಕಾಡುಗೊಲ್ಲರನ್ನು ಭೇಟಿ ಮಾಡಿ ಸಮಸ್ಯೆ ಆಲಿಸಿ ಮಾತನಾಡಿದ ತಾಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿ ನಾದೂರು ಕೆಂಚಪ್ಪ ಶಿರಾ ತಾಲೂಕಿನ ದ್ವಾರಾಳ ಗೊಲ್ಲರಹಟ್ಟಿಯ ಮಾರ್ಗವಾಗಿ ತುಮಕೂರು -ದಾವಣಗೆರೆ ರೈಲ್ವೆ ಮಾರ್ಗದ ಕಾಮಗಾರಿ ನಡೆಯುತ್ತಿದೆ. ದ್ವಾರಳ ಗೊಲ್ಲರ ಹಟ್ಟಿಯ ಹಲವಾರು ಜನರಿಗೆ 2019 ರಲ್ಲಿ ನೋಟಿಸ್ ನೀಡಲಾಗಿದ್ದು,ರೈಲ್ವೆ ಕಾಮಗಾರಿಗೆ ನಿಮ್ಮ ಮನೆಗಳು ಬಿಟ್ಟುಕೊಡಬೇಕು ಇದಕ್ಕೆ ಸೂಕ್ತ ಪರಿಹಾರ ಹಾಗೂ ಪುನರ್‌ವಸತಿ ಕಲ್ಪಿಸುವುದಾಗಿ ನೋಟಿಸ್ ನಲ್ಲಿ ಸೂಚಿಸಲಾಗಿದೆ. ಆದರೆ ರೈಲ್ವೆ ಭೂ ಸ್ವಾಧೀನ ಅಧಿಕಾರಿಗಳು ದ್ವಾರಳ ಗೊಲ್ಲರ ಹಟ್ಟಿಯ ಕಾಡುಗೊಲ್ಲ ಸಮುದಾಯದ 11 ಮನೆಗಳನ್ನು ಜೆಸಿಬಿ ಬಳಸಿ ತೆರವು ಮಾಡಲು ಮುಂದಾಗಿದ್ದಾರೆ. ಇದು ಕಾನೂನು ಬಾಹಿರವಾಗಿದ್ದು ಸೂಕ್ತ ಪರಿಹಾರ ನೀಡದೆ ಕಾಡುಗೊಲ್ಲರ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ.

ಶತಮಾನಗಳಿಂದ ಇವರು ಸೂರು ಕಟ್ಟಿಕೊಂಡು



ಭೂ ಸ್ವಾಧೀನ ಅಧಿಕಾರಿಗಳ ವಿರುದ್ಧ ರೈತರು ಹಾಗೂ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದರು.

ನೆಲೆ ಕೊಂಡಿದ್ದಾರೆ. ರೈಲ್ವೆ ಯೋಜನೆಗೆ ಬಿಡುವುದಿಲ್ಲ ಎಂದು ಹೇಳುತ್ತಿಲ್ಲ, ಬದಲಿಗೆ ಸೂಕ್ತ ಪರಿಹಾರ ನೀಡಿಪುನರ್ವಸತಿಕಲ್ಪಿಸಿಕೊಡಿಎಂದುಒತ್ತಾಯಿಸಿದ ಅವರು ಜಿಲ್ಲಾಡಳಿತ ತಕ್ಷಣ ಇತ್ತ ಗಮನಹರಿಸಿ ಮನೆಗಳನ್ನು ಕಳೆದುಕೊಳ್ಳುತ್ತಿರುವ ಕಾಡುಗೊಲ್ಲರಿಗೆ ಸೂಕ್ತ ಪರಿಹಾರ ನೀಡಿ ನ್ಯಾಯ ಒದಗಿಸುವಂತೆ ಮನವಿ ಮಾಡಿದರು. ಪರಿಹಾರ ನೀಡದೆ ದೌರ್ಜನ್ಯವೆಸಗಿದರೆ ರೈತ ಸಂಘ ನ್ಯಾಯಕ್ಕಾಗಿ ಪ್ರತಿಭಟನೆ ಮಾಡಲಿದೆ ಎಂದರು.

ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಎನ್. ಸಿ. ಮಂಜುನಾಥ್ ಮಾತನಾಡಿ ಭೂ ಸ್ವಾಧೀನ ಅಧಿಕಾರಿಗಳು ಕಾಡುಗೊಲ್ಲ ಕುಟುಂಬಗಳ ಮೇಲೆ ದೌರ್ಜನ್ಯ ಮಾಡುತ್ತಿರುವುದು ಸರಿಯಲ್ಲ. ತಾತ ಮುತ್ತಾತನ ಕಾಲದಿಂದ ಮನೆ ಕಟ್ಟಿಕೊಂಡು ಇಲ್ಲಿಯೇ ವಾಸ ಮಾಡುತ್ತಿರುವ ಕುಟುಂಬಗಳಿಗೆ ನಿಮ್ಮ ಭೂಮಿ ಪಡ ಬಿದ್ದಿದೆ, ಪರಿಹಾರ ಸಿಗುವುದಿಲ್ಲ ಎಂದು ಹೇಳುತ್ತಿರುವುದು ಬಡ ಕುಟುಂಬಗಳ ಮೇಲಿನ ದೌರ್ಜನ್ಯವಾಗಿದೆ. ಈ ಬಗ್ಗೆ ರೈಲ್ವೆ ಸಚಿವರಾದ ವಿ. ಸೋಮಣ್ಣ ಹಾಗೂ ಶಿರಾ ಕ್ಷೇತ್ರದ ಶಾಸಕರಾದ ಟಿ.ಬಿ. ಜಯಚಂದ್ರರವರು ಮಧ್ಯ ಪ್ರವೇಶ ಮಾಡಿ ಈ ಕಾಡುಗೊಲ್ಲ ಕುಟುಂಬದ ಮನೆಗಳಿಗೆ ಸೂಕ್ತ ಪರಿಹಾರ ಕೊಡಿಸಬೇಕು ಎಂದರು.

ಈ ಸಂದರ್ಭದಲ್ಲಿ ಮುಖಂಡ ಸಣ್ಣೀರಪ್ಪ ಲಕ್ಷ್ಮಿ ಸಾಗರ ಗ್ರಾಮ ಪಂಚಾಯತಿ ಮಾಜಿ ಸದಸ್ಯ ವಿವೇಕಾನಂದ ರೈತ ಸಂಘದ ಮುಕುಂದಪ್ಪ, ಮುಖಂಡರಾದ ದೇವರಾಜು, ರಾಮಣ್ಣ, ಮೋಹನ್, ಶಿವಲಿಂಗಣ್ಣ, ಅಟ್ಟಮ್ಮ, ಜುಂಜುಮ್ಮ, ಚಿತ್ತಮ್ಮ, ಸುಶೀಲಮ್ಮ, ರುದ್ರೇಶ್ ಸೇರಿದಂತೆ ಹಲವರು ಇದ್ದರು.



ತುರುವೇಕೆರೆ ತಾಲೂಕಿನ ದಂಡಿನಶಿವರ ಹೋಬಳಿಯ ಸಂಪಿಗೆ ಗ್ರಾಮದ ಶ್ರೀನಿವಾಸ ಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಅದ್ದೂರಿ ಬ್ರಹ್ಮ ರಥೋತ್ಸವ ಜರುಗಿತು. ಜಾತ್ರೆಯ ಅಂಗವಾಗಿ ಶ್ರೀನಿವಾಸ ಸ್ವಾಮಿಯನ್ನು ವಿವಿಧ ಹೂಗಳಿಂದ ಹಾಗೂ ದೇವಾಲಯ, ಗ್ರಾಮದ ರಾಜ ಬೀದಿಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಉತ್ಸವ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಂಗಳ ವಾದ್ಯದೊಂದಿಗೆ ಮೆರಣಿಗೆ ಮಾಡಲಾಯಿತು. ದೇವರ ಉತ್ಸವದುದ್ದಕ್ಕೂ ಪಟಾಕಿ ಸಿಡಿಲಾಯಿತು. ಭಕ್ತಾದಿಗಳಿಗೆ ಪಾನ, ಫಲಹಾರ ಮತ್ತು ಮಜ್ಜಿಗೆಯನ್ನು ನೀಡಲಾಯಿತು.

ಬೆಂಗಳೂರು ಮೆಟ್ರೋಗೆ ಕೆಂಪೇಗೌಡ ಹೆಸರಿಡಿ: ನಂಜಾವಧೂತ ಸ್ವಾಮೀಜಿ



• **ಕನ್ನಡಪ್ರಭವಾರ್ತೆ** ಪಾವಗಡ

ಬೆಂಗಳೂರಿನ ನಮ್ಮ ಮೆಟ್ರೋಗೆ ಕೆಂಪೇಗೌಡ ಅವರ ಹೆಸರು ನಾಮಕರಣಗೊಳಿಸಲು ಒತ್ತಾಯಿಸಿದ್ದು, ಇದರ ಜತೆ ಗಡಿ ಭಾಗದ ಜನತೆಗೆ ಬದುಕು ಕಟ್ಟಿಕೊಡುವ ಯೋಜನೆಗಳು ರೂಪಿಸುವತ್ತ ಸರ್ಕಾರ ಮುಂದಾಗಬೇಕೆಂದು ಶಿರಾ ತಾಲೂಕು ಸ್ಪಟಿಕಪುರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಶ್ರೀ ಡಾ.ನಂಜಾವಧೂತ ಸ್ವಾಮೀಜಿ ಹೇಳಿದರು.

ಒಕ್ಕಲಿಗರ ಸಮುದಾಯದ ಕೆಂಪೇಗೌಡ ಯುವಕರ ಸಂಘದ ವತಿಯಿಂದ ಭಾನುವಾರ ತಾಲೂಕಿನ ಗುಜ್ಜನಡು ಗ್ರಾಪಂ ವ್ಯಾಪ್ತಿಯ ಸಿ. ಎಚ್.ಪಾಳ್ಯ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡ ಪುತ್ಥಳಿ ಅನಾವರಣ ಹಾಗೂ ಕುಂಚಿಟಿಗ ಒಕ್ಕಲಿಗರ ಜಾಗೃತಿ ಸಮಾರಂಭದ ದಿವ್ಯ ಸಾನಿಧ್ಯವಹಿಸಿ ಮಾತನಾಡಿದರು.

ಕಳೆದ ಸರ್ಕಾರದ ಅವಧಿಯಲ್ಲಿ ಈಗಾಗಲೇ ಬೆಂಗಳೂರು ವಿಮಾನ ನಿಲ್ದಾಣ ಹಾಗೂ ಬಸ್ ನಿಲ್ದಾಣಕ್ಕೆ ಹೆಸರು ನಾಮಕರಣಗೊಳಿಸಿದ್ದು, ಅದರಂತೆಯೇ ಬೆಂಗಳೂರಿನ ನಮ್ಮ ಮೆಟ್ರೋಗೆ ಕೆಂಪೇಗೌಡರ ಹೆಸರು ನಾಮಕರಣಗೊಳಿಸಬೇಕುಆ ಮೂಲಕ ವಿಶ್ವಕ್ಕೆ ಅವರ ಕೀರ್ತಿ ಪತಾಕೆ ಸಾರಬೇಕಿದೆ ಎಂದರು.

ನ್ಯಾಯಾಲಯದ ಆದೇಶ ಹಾಗೂ ಜನಪರ ಹೋರಾಟದಫಲವಾಗಿತುಂಗಭದ್ರಾ ಕುಡಿಯುವ ನೀರು ತಾಲೂಕಿ ಗೆ ಅನುಷ್ಠಾನವಾಗಿದ್ದು, ನೀರಾವರಿಗೆ ಭದ್ರಾಮೇಲ್ದಂಡೆ ಕಾರ್ಯಗತವಾಗಬೇಕು. ಆದರೆ ಇದುವರೆವಿಗೂ ನೀರು ಲಿಪ್ಟ್ ಮಾಡುವ ಕೆಲಸ ಸಹ ಆಗಿಲ್ಲ. ರೈತ ಹಾಗೂಜನಪರಹೋರಾಟಕ್ಕೆಸದಾಬೆಂಬಲವಾಗಿ ನಿಲ್ಲಲಿದ್ದು, ಸಮಸ್ಯೆಗಳಿಗೆ ಮಠ ಯಾವಾಗಲೂ ಶ್ರೀರಕ್ಷೆಯಾಗಿ ನಿಲ್ಲಲಿದೆ ಎಂದರು.

ಹಾಸ್ಯ ನಟ ಪಾವಗಡದ ರಂಗಾಯಣ ರಘು ಮಾತನಾಡಿ,ಕೆಂಪೇಗೌಡರುಜಾತಿಗೆಸೀಮಿತರಾಗಿ ಕೆಲಸ ಮಾಡಿಲ್ಲ.ಅವರು ಎಲ್ಲಾ ಜಾತಿ ಧರ್ಮಕ್ಕೆ ಅನುಕೂಲವಾಗುವ ರೀತಿಯಲ್ಲಿ ಯೋಜನೆಗಳನ್ನು ರೂಪಿಸಿದ್ದಾರೆ. ಜಾತಿಯಿಂದಾಚೆ ಕೆಲಸ ಮಾಡಬೇಕು. ಎಲ್ಲರಲ್ಲಿಯೂ ಸ್ನೇಹ ಸೌಹಾರ್ದತೆ ರೂಪಿಸಿಕೊಳ್ಳುವಂತೆ ಕರೆ ನೀಡಿದರು.

ಮಾಜಿ ಶಾಸಕ ಸಿ.ಎಂ.ರಾಜೇಶ್‌ಗೌಡ್ರು ಚಲನಚಿತ್ರ ನಾಯಕ ನಟ ನೆನಪಿರಲಿ ಪ್ರೇಮ್, ರಾಜ್ಯ ಜೆಡಿಎಸ್ ಉಪಾಧ್ಯಕ್ಷ ಎನ್.ತಿಮ್ಮಾರೆಡ್ಡಿ ಕೆಪಿಸಿಸಿ ಉಪಾಧ್ಯಕ್ಷ ಮುರಳಿಧರ ಹಾಲಪ್ಪ, ಹೈಕೋರ್ಟ್ ವಕೀಲರಾದ ಗುಜ್ಜನಡು ಡಿ. ಹನುಮಂತರಾಯ ಡಾ.ಜಿ.ಕಿರಣ್, ಸಾಯಿಸುಮನ, ರಾಜು ಬೇತೂರು, ಜಿ.ವಿ.ಬಲರಾಮ್,ತುಮುಲ್ ನಿರ್ದೇಶಕ ಕೊಂಡವಾಡಿ ಚಂದ್ರಶೇಖರ್, ನಳಿನಿ ಗೋವಿಂದಪ್ಪ, ಹನುಮಂತರಾಯಪ್ಪ, ತಿಪ್ಪೇವೀರಣ್ಣ, ವಿಎಸ್‌ಎಸ್‌ಎನ್ ಅಧ್ಯಕ್ಷ ವೀರಭದ್ರಪ್ಪ ಎನ್.ಎ.ಈರಣ್ಣ,ಎಲ್ ಜಗನ್ನಾಥ್ ,ಬಸವರಾಜು, ಕೆ.ಟಿ.ಹಳ್ಳಿ ಮಹೇಶ್ ,ನರಸೇಗೌಡ,ಮಂಜು, ಮುಖ್ಯ ಶಿಕ್ಷಕ ಎಂ.ಎಸ್ ಮಹೇಶ್ವರಪ್ಪ ,ಜಯಮ್ಮ ಇತರರಿದ್ದರು.

ಹಕ್ಕಿಗಾಗಿ ಹೋರಾಟ | ಜಿಲ್ಲಾ ಪತ್ರ ಬರಹಗಾರರ ಸಂಘದ ಶಿರಾ ಘಟಕದ ಅಧ್ಯಕ್ಷ ನಾಗೇಂದ್ರ

ಕಾಗದರಹಿತ ನೋಂದಣಿ ವ್ಯವಸ್ಥೆ ತಕ್ಷಣ ಸ್ಥಗಿತಗೊಳಿಸಿ

• **ಕನ್ನಡಪ್ರಭ ವಾರ್ತೆ** ಶಿರಾ

ಕಾವೇರಿ ತಂತ್ರಾಂಶದ ಮೂಲಕ ಕಾಗದರಹಿತ ಡಿಜಿಟಲ್ ನೋಂದಣಿ ವ್ಯವಸ್ಥೆಯಲ್ಲಿ ಸಾರ್ವಜನಿಕರ ಆಸ್ತಿ, ದಾಖಲಾತಿಗೆ ಭದ್ರತೆ ಇಲ್ಲ, ತಕ್ಷಣ ಈ ವ್ಯವಸ್ಥೆ ಸ್ಥಗಿತಗೊಳಿಸಿ. ಅದರಲ್ಲಿರುವ ಲೋಪದೋಷ ಸರಿಪಡಿಸಬೇಕೆಂದು ಜಿಲ್ಲಾ ಪತ್ರ ಬರಹಗಾರರ ಸಂಘದ ಶಿರಾ ಘಟಕದ ಅಧ್ಯಕ್ಷ ನಾಗೇಂದ್ರ ತಿಳಿಸಿದರು.

ಅವರು ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಕಾಗದ ರಹಿತ ಡಿಜಿಟಲ್ ನೋಂದಣಿ ವ್ಯವಸ್ಥೆ ಪ್ರಸ್ತುತ ಚಾಮರಾಜನಗರದಲ್ಲಿ ಪ್ರಾಯೋಗಿಕವಾಗಿ ಜಾರಿಗೆ ಬಂದಿದ್ದು, ಉಳಿದ ಜಿಲ್ಲೆಗಳಿಗೂ ವಿಸ್ತರಿಸಲಾಗುತ್ತದೆ. ಇದರಲ್ಲಿ ಆಸ್ತಿ ನೋಂದಣಿ ಆಗಿರುವ ಬಗ್ಗೆ ಭೌತಿಕ ಪತ್ರಗಳನ್ನು ಖರೀದಿದಾರರಿಗೆ ನೀಡುತ್ತಿಲ್ಲ. ಆಸ್ತಿ ಖರೀದಿದಾರರಿಗೆ ನಿಖರ ದಾಖಲೆ ಸಿಗುವುದಿಲ್ಲ. ಆಸ್ತಿ ನೋಂದಣಿ ಸಮಯದಲ್ಲಿ ಖರೀದಿದಾರರು, ಮಾರಾಟಗಾರರು ಭೌತಿಕ ಸಹಿ ಮಾಡದೆ ಇ-ಸಹಿ ಮಾಡುವುದರಿಂದ ಅನಕ್ಷರಸ್ಥ ರನ್ನು ವಂಚಿಸಿ ಆಸ್ತಿ ನೋಂದಣಿ ಮಾಡಿಸಿಕೊಳ್ಳುವ ಅಪಾಯವಿದೆ. ಸಾರ್ವಜನಿಕರ ಹಿತಾಸಕ್ತಿಯಿಂದ ಈ ತಂತ್ರಾಂಶವನ್ನು



ಜಾರಿಗೆ ತರುವುದನ್ನು ನಾವು ವಿರೋಧಿಸುತ್ತೇವೆ ಹಾಗೂ ಕಾನೂನು ಸಮರಕ್ಕೂ ನಾವು ಸಿದ್ದರಾಗಿದ್ದೇವೆ. ಮುಂದಿನ ದಿನಗಳಲ್ಲಿ ಸರಕಾರ ಇದನ್ನು ಸರಿಪಡಿಸದಿದ್ದರೆ ಉಗ್ರ ಪ್ರತಿಭಟನೆ ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಪ್ರಧಾನ ಕಾರ್ಯದರ್ಶಿ ಚಂದ್ರಕಲಾ ಮಾತನಾಡಿ ನೂತನವಾಗಿ ಜಾರಿಗೆ ತಂದಿರುವ ತಂತ್ರಾಂಶ ಪೇಪರ್ ಲೆಸ್ ಅಷ್ಟೇ ಅಲ್ಲ ಪೆನ್ ಲೆಸ್ ಕೂಡ ಆಗಿದೆ. ಇದರಿಂದ ಸಾರ್ವಜನಿಕರಿಗೆ ಮೋಸ ಆಗುವ ಸಾಧ್ಯತೆ ಹೆಚ್ಚಾಗಿದ್ದು, ಸೈಬರ್‌ಕ್ರೈಂ ಹೆಚ್ಚಾಗುವ ಸಾಧ್ಯತೆ ಇದೆ. ಬೇರೆ ರಾಜ್ಯಗಳಲ್ಲಿ ನೀಡಿರುವಂತೆ ನಮ್ಮ ಪತ್ರ ಬರಗಾರರಿಗೆ ಪ್ರತ್ಯೇಕ ಲಾಗಿನ್ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪತ್ರ ಬರಹಗಾರರ ಸಂಘದ ಶಿರಾ ತಾಲೂಕ ಅಧ್ಯಕ್ಷ ನಾಗೇಂದ್ರ, ಪ್ರಧಾನಕಾರ್ಯದರ್ಶಿ ಚಂದ್ರಕಲಾ ದಶರಥ, ಖಜಾಂಚಿ ನರಸಪ್ಪ, ಉಪಾಧ್ಯಕ್ಷ ಶ್ರೀರಂಗ, ಪತ್ರ ಬರಹಗಾರರಾದ ಲಕ್ಷ್ಮಿಕಾಂತ್,ರಾಜಣ್ಣ ಪುಟ್ಟಣ್ಣ ಸೇರಿದಂತೆ ಇತರೆ ಪತ್ರ ಬರಹಗಾರರು ಹಾಜರಿದ್ದರು.